ಸರಸ್ವತಿ ರಿಸಬೂಡರು ಇದನ್ನೆಲ್ಲಾ ತಿಳಿದವರೇ ಆಗಿರಬೇಕು. ಏಕೆಂದರೆ, ಕರ್ವೆ ಅವರ 'ಯುಗಾಂತ'ವಾಗಲಿ, ಭಿಡೆ ಅವರ 'ವಾಲ್ಮೀಕಿ...' ಆಗಲಿ, ಎರಡೂ ಕೂಡ ನಾವು ಪರಂಪರೆಯನ್ನು ಮುರಿದು ಕಟ್ಟಿಕೊಳ್ಳದೆ ಬಿಚ್ಚಿ ಕಟ್ಟಿಕೊಳ್ಳುವದು ಸಾಧ್ಯವಿಲ್ಲವೆ ಎಂದು ಪರೀಕ್ಷಿಸಿಕೊಳ್ಳುವ ಪ್ರಯೋಗಗಳಾಗಿವೆ. ಕರ್ವೆ ಅವರು ಮಹಾಭಾರತದ ಬಗೆಗೆ ಬಂದ ಹಲವಾರು ಸಂಸ್ಕೃತ ಕಾವ್ಯರೂಪಿ ಕೃತಿ ಸಮುಚ್ಚಯಗಳನ್ನು ಕೂಡ ಗಮನಿಸುತ್ತಾರೆ. ಆದರೆ, ಅವರು ಲಕ್ಷಿಸದೆ ಇದ್ದ ಈ ಭಾಗವನ್ನು ಹೀಗೂ ಲಕ್ಷಿಸಬಹುದು ಮತ್ತು ಅದು ಈ ಕಾಲದ ಚಿಂತನೆಗೆ ಅವಶ್ಯವಾದ ಗಮನಿಕೆ ಕೂಡ ಅಹುದು ಎನ್ನುವ ನೆಲೆಯಲ್ಲಿಯೇ ಅವರು ತಮ್ಮ ಗಮನಿಕೆಗಳನ್ನು ದಾಖಲಿಸುತ್ತಾರೆ. ಸರಸ್ವತಿ ಅವರು ತಾವು ಅನುವಾದ ಮಾಡುವ ಮೊದಲು ಆಯಾ ಕೃತಿಗಳ ತಿಳಿವನ್ನು ಮಾತ್ರ ಆಧರಿಸದೆ, ಅದರ ಅನುಭವರೂಪಿ ಅನುಸಂಧಾನವನ್ನೂ ಒಳಗೆ ಇಳಿಸಿಕೊಂಡೆ ಮುಂದುವರೆಯುತ್ತಾರೆ. ಹೀಗಾಗಿ, ಅವರ ಅನುವಾದಗಳನ್ನು ಓದುವಾಗ ನಮಗೆ ಆ ವಿಚಾರಗಳು ಕನ್ನಡದ ಸಂಸ್ಕೃತಿಯ ಸಂಸ್ಕಾರ ಪಡೆದ ಕೃತಿಗಳಂತೆಯೇ ಒಳಗೆ ಸೆಳೆಯುತ್ತವೆ.

ಒಮ್ಮೊಮ್ಮೆ ಚಿಂತನೆಯ ತಾತ್ವಿಕ ಲೋಕದಲ್ಲೂ ಅವಿವೇಕದ ವೈರಾಣುಗಳು ಹೊಕ್ಕು ಬಿಡುತ್ತವೆ. ಅಲ್ಲಿನ ಜೀವಂತ ಹಾಗೂ ಜ್ವಲಂತ ದುಃಖಗಳನ್ನು ಆಕ್ರಮಿಸಿ, ಅಸ್ತಿತ್ವದ ಅರ್ಥಕ್ಕೇನೆ ಅರ್ಥವಾಗದ ಸಾವುಗಳನ್ನು ತರತೊಡಗುತ್ತವೆ. ಆಗ ಒಂದು ಬಗೆಯ ಸಾಂಕ್ರಾಮಿಕ ಸಾರ್ವಜನಿಕತೆ ಎಲ್ಲೆಡೆ ಅನೇಕ ತುರ್ತು ಸಂದರ್ಭಗಳನ್ನು ನಿರ್ಮಿಸುತ್ತದೆ. ಆಗ ಕಾಲವು ಕೊಟ್ಟ ರಿಯಾಯ್ತಿಯ ಮಿತಿಯಲ್ಲೇ ನಮ್ಮ ನಮ್ಮ ವೈಚಾರಿಕ ಮಳಿಗೆಗಳಲ್ಲಿ ನಮಗೆ ಸಿಕ್ಕಷ್ಟನ್ನೆ, ಸಿಕ್ಕಿದ್ದನ್ನೆ ಬಳಸಿಕೊಂಡು ಉಣ್ಣಬೇಕಾಗುತ್ತದೆ. ಉಣಿಸಲೂ ಬೇಕಾಗುತ್ತದೆ. ಇಂತಹ ಒತ್ತಡಗಳು ಚಿಂತನೆಗೆ ಎಷ್ಟು ಬಗೆಯ ದಣಿವುಗಳನ್ನು ಉಂಟು ಮಾಡುತ್ತವೆ ಎನ್ನುವುದು ಕೂಡ ಸರಸ್ವತಿಯವರ ಅನುವಾದಗಳ ಹಿಂದೆ ಮಿಡಿಯುವ ಸೂಕ್ಷ್ಮ ತಾನಪೂರಾ ಆಗಿ ಕೇಳಿಸುತ್ತದೆ. ಆದರಿಷ್ಟೆ, ತನಗೆ ದಕ್ಕಿದ್ದು ಅನೇಕ ನಿರ್ಬಂಧಗಳ ನಡುವೆಯೇ ನಾನೇ ಪಡೆದುಕೊಂಡದ್ದು ಎಂಬ ಎಚ್ಚರ ಅವರ ಅನುವಾದಗಳಲ್ಲಿಯೂ ಇದೆ, ಮೂಲ ಬರಹಗಳಲ್ಲಿಯೂ ಇದೆ. ಸರಸ್ವತಿ ರಿಸಬೂಡರು ಕನ್ನಡಕ್ಕೆ ಕೊಟ್ಟ ಕಾಣಿಕೆಗಳನ್ನು ನಾವು ಕನ್ನಡಿಗರು ನಮ್ಮ ಪ್ರಜ್ಞೆಯ, ಸಾರಸ್ವತ ಚರಿತ್ರೆಯ ಷೋಕೇಸ್‌ನಲ್ಲಿ ಇಟ್ಟು ಸುಖ ಹಾಗೂ ಅಹಂಕಾರ ಪಡುವವರಾಗದಂತೆ ಎಚ್ಚರವನ್ನು ವಹಿಸಬೇಕಾಗಿದೆ.

## ಆನಂದ ಝುಂಜರವಾಡ

ಬಾಗಲಕೋಟೆಯವರಾದ ಆನಂದ ಝುಂಜರವಾಡರು ಈ ತನಕ ಒಂಬತ್ತು ಕವಿತಾ ಸಂಕಲನಗಳನ್ನು ಪ್ರಕಟಿಸಿದ್ದಾರೆ. ಅವರ ಸಮಗ್ರ ಕಾವ್ಯ 'ಪ್ರೇತ ಕಾಂಡ' ಎಂಬ ಹೆಸರಿನಲ್ಲಿ ಪ್ರಕಟವಾಗಿದೆ. ಪ್ರಸನ್ನ ವೆಂಕಟದಾಸರ ಜೀವನವನ್ನು ಆಧರಿಸಿದ 'ಹಕ್ಕಿಯ ಹೆಗಲೇರಿ' ನಾಟಕವನ್ನು ಬರೆದಿದ್ದಾರೆ. ದ.ರಾ. ಬೇಂದ್ರೆ ಅವರ ಕುರಿತು ಮರಾಠಿ ಲೇಖಕರು ಬರೆದ ಲೇಖನಗಳನ್ನು 'ದೂರ್ವಾಂಕುರ' ಹಾಗೂ 'ಬಂಧವಿರದ ಬಂಧುರ' ಎಂಬ ಎರಡು ಕೃತಿಗಳ ಮೂಲಕ ಕನ್ನಡಕ್ಕೆ ತಂದಿದ್ದಾರೆ. ಆಲೂರು ವೆಂಕಟರಾಯರು ಮತ್ತು ಕೆರೂರು ವಾಸುದೇವಾಚಾರ್ಯರು ಅನುವಾದಿಸಿರುವ ಬಾಲಗಂಗಾಧರ ತಿಲಕರ 'ಗೀತಾ ರಹಸ್ಯ'ದ ಎರಡನೇ ಆವೃತ್ತಿಯನ್ನು ಸಂಪಾದಿಸಿದ್ದಾರೆ. ಕನ್ನಡ ಮತ್ತು ಮರಾಠಿಯ ನಡುವಿನ ಸಾಂಸ್ಕೃತಿಕ ಜಗತ್ತಿನ ಸಂಪರ್ಕ–ಸಹವಾಸ ಇರುವ ಆನಂದ ಅವರಿಗೆ ಸಂಗೀತ ಬಗ್ಗೆಯೂ ಅಪಾರವಾದ ಒಲವಿದೆ.